# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## ಚುಕ್ಕೆ ರಹಿತ ಪ್ರಶ್ನೆ

ದಿನಾಂಕ : 25-03-2021 ಪ್ರಶ್ನೆ ಸಂಖ್ಯೆ : 1809 (1524)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಕೆ. ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರ ನೀಡಬೇಕಾದ ದಿನಾಂಕ : 25-03-2021

ಉತ್ತರಿಸುವ ಸಚಿವರು: ಗೃಹ ಮತ್ತು ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು

ವಿಷಯ : ಬೆಂಗಳೂರು ನಗರದಲ್ಲಿ ವಾಹನಗಳ ಟೋಯಿಂಗ್ ವ್ಯವಸ್ಥೆಯಿಂದಾಗುತ್ತಿರುವ ಸಮಸ್ಯೆ ನಿವಾರಣೆ ಬಗ್ಗೆ

(ಅ) ವಾಹನ ನಿಲುಗಡೆ ನಿಷೇಧ ಸ್ಥಳಗಳಲ್ಲಿ ಪಾರ್ಕಿಂಗ್ ಮಾಡಲಾದ ವಾಹನಗಳನ್ನು ಟೋಯಿಂಗ್ ಮಾಡಿ (ಎತ್ತಿಕೊಂಡು ಹೋಗುವ) ಪೊಲೀಸ್ ಠಾಣಾ ಬಳಿ ಸಾಗಿಸುವ ನಂತರದಲ್ಲಿ ದಂಡ ವಿಧಿಸಲಾಗುತ್ತಿರುವ ಅಂಶವು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಕಳೆದ 3 ವರ್ಷಗಳ ಅವಧಿಯಲ್ಲಿ ಟೋಯಿಂಗ್‌ನಿಂದಾಗಿ ದ್ವಿಚಕ್ರ/ಕಾರು ಸೇರಿದಂತೆ ವಾಹನ ಸವಾರರ/ಮಾಲೀಕರಿಂದ ಸಂಗ್ರಹಿಸಲಾದ ಶುಲ್ಕ/ದಂಡ ಎಷ್ಟು ; (ಪಾವತಿ ಕುರಿತಾಗಿ ಪ್ರತ್ಯೇಕ ಮಾಹಿತಿ ಒದಗಿಸುವುದು)

(ಆ) ವಾಹನ ನಿಲುಗಡೆ ನಿಷೇಧ ಫಲಕ ಅಳವಡಿಸದೇ, ಸಾರ್ವಜನಿಕರ ಗಮನಕ್ಕೆ ಬಾರದೇ ನಿಲುಗಡೆಯಾಗಿ ನಂತರದಲ್ಲಿ ದಂಡ ಪಾವತಿ ಕುರಿತಾಗಿ ಪ್ರತಿನಿತ್ಯ ವಾಹನ ಸವಾರರ ಮತ್ತು ಪೊಲೀಸ್ ಸಿಬ್ಬಂದಿ, ಖಾಸಗಿ/ಹೊರಗುತ್ತಿಗೆ ನೌಕರರ ಮಧ್ಯೆ ನಡೆಯುತ್ತಿರುವ ವಾಗ್ವಾದ, ಭ್ರಷ್ಟಾಚಾರ ಕುರಿತಂತೆ ಸರ್ಕಾರ ಗಂಭೀರವಾಗಿ ಆಲೋಚಿಸಿದೆಯೇ; ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ಕೈಗೊಂಡಿರುವ ಪರಿಹಾರಾತ್ಮಕ ಕ್ರಮಗಳೇನು ; (ಸಂಪೂರ್ಣ ವಿವರ ಒದಗಿಸುವುದು)

(ಇ) ಬೆಂಗಳೂರು ನಗರದ ಯಾವ ಯಾವ ರಸ್ತೆಗಳಲ್ಲಿ ವಾಹನ ನಿಲುಗಡೆ ದಟ್ಟಣೆಯನ್ನು ಸರ್ಕಾರ ಗುರುತಿಸಿದೆ ; (ವಿವರ ನೀಡುವುದು)

(ಈ) ವಾಹನ ನಿಲುಗಡೆ ಸ್ಥಳಾವಕಾಶ ಹೆಚ್ಚಿಸುವ ಟೋಯಿಂಗ್ ನಿಯಮಗಳನ್ನು ಸರಳಗೊಳಿಸಿ, ಸಾರ್ವಜನಿಕರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಸರ್ಕಾರದ ಆಲೋಚನೆ ಏನು ? (ಸಂಪೂರ್ಣ ವಿವರ ಒದಗಿಸುವುದು)